ಶ್ರೀ ವೀರಣ್ಣ (ಹೆಣಕಾಸು, ಸಣ್ಣ ಉಳಿತಾಯ ಮತ್ತು ಬಂದೀಖಾನೆಗಳು ರಾಜ್ಯ ಸಚಿವರು)—

ಅ) ೩೧–೧೨–೧೯೮೭ರ ವರೆಗೆ ಸಂಗ್ರಹಿಸಲಾದ ಸಣ್ಣ ಉಳಿತಾಯದ ಮೊಬಲಗು — ಒಟ್ಟು ... ರೂ. ೩೨೭.೧೪ ಕೋಟಿ.

ಆ) ಪ್ರಸಕ್ತ ಸಾಲಿನಲ್ಲಿ ನವೆಂಬರ್‌ವರೆವಿಗೂ ಬಿಡುಗಡೆ ಆದ ಮೊತ್ತ ರೂ. ೧೯ ಕೋಟಿ.

ಇ) ಇಂದಿರಾ ವಿಕಾಸ ಪತ್ರಗಳ ಮೂಲಕ ಡಿಸೆಂಬರ್ ಅಂತ್ಯದವರೆಗೆ ೫೨.೦೩ ಕೋಟಿ ಹಣ ಸಂಗ್ರಹಿಸಲಾಗಿದೆ.

ಈ) ಇಂದಿರಾ ವಿಕಾಸ ಪತ್ರಗಳಲ್ಲಿ ಸಂಗ್ರಹಿಸಲಾದ ಹಣಕ್ಕೆ ಪ್ರತ್ಯೇಕವಾಗಿ ಹಣ ಬಿಡುಗಡೆ ಮಾಡುವುದಿಲ್ಲ.

ಮಾಜಿ ಶಾಸಕರಿಗೆ ಆಗಂತ್ತಿರುವ ತೊಂದರೆಯ ಬಗ್ಗೆ.

೧೬೭. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಾನೂನು ಮಂತ್ರಿ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸ್ತವರೇ ?

ಅ) ಮಾಜಿ ಶಾಸಕರಿಗೆ ರಾಜ್ಯದಲ್ಲಿ ಸಂಚರಿಸಲು ಬಸ್ ಪಾಸ್ ನೀಡಲು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ?

ಆ) ಅವರಿಗೆ ವೈದ್ಯಕೀಯ ಸೌಲಭ್ಯವನ್ನು ಕೊಡುವ ಬಗ್ಗೆ ಸರ್ಕಾರದ ನಿಲುವೇನು ?

ಇ) ಮಾಜಿ ಶಾಸಕರಿಂದ ಹಾಗೂ ಇತರರಿಂದ ಈ ಬಗ್ಗೆ ಸರಕಾರಕ್ಕೆ ಮನವಿಗಳು ಬಂದಿರುವುದ ನಿಜವೆ ?

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು) —

ಅ) ವಿಶೇಷ ಮಂಡಲಿ. ಕರ್ನಾಟಕ ವಿಧಾನ ಮಂಡಲವು, ದಿನಾಂಕ ೨೧–೧–೧೯೮೬ರಂದು ನಡೆದ ಸಭೆಯಲ್ಲಿ ಮಾಜಿ ಶಾಸಕರಿಗೆ ಬಸ್ ಪಾಸುಗಳನ್ನು ಮತ್ತು ವೈದ್ಯಕೀಯ ಸೌಲಭ್ಯಗಳನ್ನು ನೀಡಲು ಇದು ಸೂಕ್ತ ಸಮಯವಲ್ಲವೆಂದು ನಿರ್ಧರಿಸಿದೆ.

ಆ) – ಡಿಟೋ –

ಇ) ನಿಜ.

ಹೆರಿಗೆ ಭತ್ಯೆ ಮತ್ತು ಆರೋಗ್ಯ ಮಾರ್ಗದರ್ಶಕರಿಗೆ ಕೊಟ್ಟ ಗೌರವಧನ.

೫೦೩. ಶ್ರೀಮತಿ ಸುಮಾವಸಂತ(ವಿರಾಜಪೇಟೆ).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯಲ್ಲಿ ಇಲಾಖೆ ಪತಿಯಿಂದ ಬಟವಾಡೆಯಾದ (೧) ಹೆರಿಗೆ ಭತ್ಯೆ (೨) ಆರೋಗ್ಯ ಮಾರ್ಗದರ್ಶಕರಿಗೆ ಕೊಟ್ಟ ಗೌರವಧನ ಒಟ್ಟು ಮೊತ್ತವೆಷ್ಟು ?

ಆ) ಇವರೆಡೂ ಸರಿಯಾಗಿ ಫಲಾನುಭವಿಗಳಿಗೆ ಹಾಗೂ ಮಾರ್ಗದರ್ಶಕರಿಗೆ ಸೇರುತ್ತಿಲ್ಲವೆಂಬ ದೂರು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಫಲಾನುಭವಿಗಳಿಗೆ ಹೆರಿಗೆ ಭತ್ಯೆ ಕೊಡುವಾಗ ಸಂಬಂಧಪಟ್ಟ ಆರೋಗ್ಯ ಘಟಕ ಹಾಗೂ ಕೊಡುವ ವಿಧಾನ ಚೆಕ್ ಮೂಲಕ ಎಂಬ ಆದೇಶ ಸರ್ಕಾರ ಮಾಡಿದೆ ಇದ್ದು, ಇದರಿಂದ ಫಲಾನುಭವಿಗಳಿಗೆ ಬಟವಾಡೆ ಆಗದೇ ಇರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಇನ್ನು ಮುಂದಾದರೂ ಬಟವಾಡೆ ಕ್ರಮ ಬದಲಾಯಿಸಿ ಸಂಬಂಧಿಸಿದ ಆರೋಗ್ಯ ಘಟಕ ಹಾಗೂ ಚೆಕ್ ಮುಖಾಂತರ ಬಟವಾಡೆ ಆದೇಶವನ್ನು ಸರಕಾರ ಕೊಡಲೇ ಹೊರಡಿಸುವುದೇ ?